ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ/01/ಐಎನ್ಎಸ್(3)/2019

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001,
ದಿನಾಂಕ:07/09/2020.

**ಜ್ಞಾಪನ**

**ವಿಷಯ:** ನವೆಂಬರ್-ಡಿಸೆಂಬರ್ 2019ರ ಡಿಪ್ಲೋಮಾ ಪರೀಕ್ಷೆಯ ವಿಷಯವಾರು ಫಲಿತಾಂಶದ ವಿಶ್ಲೇಷಣೆ ಬಗ್ಗೆ.

**ಉಲ್ಲೇಖ:** 1) ಸರ್ಕಾರದ ಆದೇಶ ಸಂಖ್ಯೆ: ಇಡಿ/109/ಟಿಪಿಇ/2011, ದಿನಾಂಕ:13/03/2012.

- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಮಂಡಳಿಯ 174ನೇ ಕೇಂದ್ರ ಸಭೆಯಲ್ಲಿ ಕ್ರಮವಾಗಿ ನವೆಂಬರ್/ಡಿಸೆಂಬರ್ 2019ರ ಡಿಪ್ಲೋಮಾ ಪರೀಕ್ಷಾ ಫಲಿತಾಂಶವನ್ನು ಅವಲೋಕಿಸಿದಾಗ ಹಲವಾರು ವಿಷಯಗಳಲ್ಲಿ ಶೇಕಡ ಶೇ.50ಕ್ಕಿಂತಲೂ ಕಡಿಮೆ ಫಲಿತಾಂಶ ಬಂದಿರುವುದು ಕಂಡುಬಂದಿರುತ್ತದೆ. ಶೇಕಡ 50ಕ್ಕಿಂತಲೂ ಕಡಿಮೆ ಫಲಿತಾಂಶ ಬಂದಿರುವ ಥಿಯರಿ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಯ ಪ್ರಾಚಾರ್ಯರುಗಳು ಈಗಾಗಲೇ ತಿಳಿಸಲಾಗಿದ್ದ ನಮೂನೆಯಲ್ಲಿ ಮಾಹಿತಿಯನ್ನು ಪ್ರತಿ ಸೆಮಿಸ್ಟರ್ ಪರೀಕ್ಷಾ ಫಲಿತಾಂಶಗಳು ಪ್ರಕಟಣೆ ಆದ ನಂತರ ಕಾಲ ಕಾಲಕ್ಕೆ ನಿರ್ದೇಶನಾಲಯಕ್ಕೆ ಉಲ್ಲೇಖ(1)ರಲ್ಲಿನ ಸರ್ಕಾರಿ ಆದೇಶದನ್ವಯ ಮಾಹಿತಿಯನ್ನು ನೀಡಲು ಆದೇಶಿಸಲಾಗಿರುತ್ತದೆ.

ಆದ್ದರಿಂದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳು ನವೆಂಬರ್/ಡಿಸೆಂಬರ್ 2019ರ ಡಿಪ್ಲೊಮಾ ಪರೀಕ್ಷಾ ಫಲಿತಾಂಶಗಳನ್ನು ವಿಶ್ಲೇಷಣೆ ಮಾಡಿ ಶೇಕಡ 50ಕ್ಕಿಂತಲೂ ಕಡಿಮೆ ಫಲಿತಾಂಶ ಬಂದಿರುವ ವಿಷಯಗಳ ಪಟ್ಟಿ ಮತ್ತು ಭೋದನೆ ಮಾಡಿರುವ ಉಪನ್ಯಾಸಕರುಗಳ ಪಟ್ಟಿಯನ್ನು ನಿಗಧಿತ ನಮೂನೆಯಲ್ಲಿ ದಿನಾಂಕ: 10/09/2020ರ ಒಳಗಾಗಿ ಮಾಹಿತಿಯನ್ನು ಜಂಟಿ ನಿರ್ದೇಶಕರು(ತನಿಖೆ) ಇವರ ಇ-ಮೇಲ್ ವಿಳಾಸ jdins.2014@gmail.com ಕ್ಕೆ ಕಳುಹಿಸಲು ತಿಳಿಸಲಾಗಿದೆ.

Link to send details in google form

ಜಂಟಿ ನಿರ್ದೇಶಕರು(ತನಿಖೆ)